**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚಿಂತಾಮಣಿ.</u>**

**<u>ಸಿ.ಸಿ.ನಂ. 1181/2022</u>**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಶಶಿಕುಮಾರ್** | | |
| **ಗಂಡಃತಂದೆಃಹೆಸರು** | **ಯರಪ್ಪ** | **ಪಿಡಬ್ಲೂಃ** | **5** |
| **ವಯಸ್ಸುಃ** | **28 ವರ್ಷ** | **ಸಿಡಬ್ಲೂಃ** | **5** |
| **ಉದ್ಯೋಗಃ** | **ಡೆಕೋರೇಷನ್** | | |
| **ವಾಸ ಸ್ಥಳಃ** | **ಶಾಪೂರ ಗ್ರಾಮ** | | |

**<u>ದಿನಾಂಕ 20-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ-</u>**

ನಿಪಿ 2 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು ,ಅದನ್ನು ನಿಪಿ 2 ಬಿ ಎಂದು ಗುರುತಿಸಲಾಯಿತು. ನಿಪಿ 2 ಕ್ಕೆ ಸಹಿಯನ್ನು ದಿಃ 12-05-2022 ರಲ್ಲಿ ಕೆಂದನಹಳ್ಳಿ ಗೇಟ್ ನ ಬಳಿ ಮಾಡಿರುತ್ತೇನೆ. ನಾನು ಕೆಲಸ ಮುಗಿಸಿಕೊಂಡು ಸಾಯಂಕಾಲ ಶಾಪೂರಿಗೆ ಹೋಗುತ್ತಿದ್ದಾಗ ಕೆಂದನಹಳ್ಳಿಯ ಗೇಟ್ ನ ಬಳಿ ಆಟೋ ಮತ್ತು ಮಿನಿ ಬಸ್ಸು ಮಧ್ಯದ ನಡುವೆ ಅಪಘಾತವಾಗಿತ್ತು. ನಮ್ಮ ಊರಿನವರಾದ ಚಾಸಾ 4, 13 ಮತ್ತು 14 ರವರು ಘಟನಾ ಸ್ಥಳಕ್ಕೆ ಹೋಗಿದ್ದೆವು ಆ ಕಾಲಕ್ಕೆ ನಮ್ಮ ಸಹಿಯನ್ನು ಮಧ್ಯಾಹ್ಞ 2.30 ಸಮಯದಲ್ಲಿ ಪೋಲೀಸರು ಪಡೆದುಕೊಂಡರು. ನಿಪಿ 2 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಗೊತ್ತು.

**ಸಿಡಬ್ಲೂಃ 5**

**ಪಾಟೀಸವಾಲುಃ ಆರೋಪಿ ಪರ ಶ್ರೀ.ಎನ್. ಕೆ. ಡಿ. ವಕೀಲರಿಂದಃ**

ನಾನು ದಿಃ 12-05-2022 ರಂದು ನಿಪಿ 2 ಕ್ಕೆ ಸಹಿ ಮಾಡಿರುತ್ತೇನೆ. ಚಾಸಾ 13 , 14 ರವರು ನಮ್ಮ ಊರಿನವರು. ನಿಪಿ 2 ನ್ನು ಕೆಂದನಹಳ್ಳಿ ಗೇಟ್ ನ ಬಳಿ ಬೆರಳಚ್ಚನ್ನು ಪೋಲೀಸರು ಮಾಡಿದರು. ಆ ಕಾಲಕ್ಕೆ ಗಣಕಯಂತ್ರವನ್ನು ಪೋಲೀಸರು ತಂದಿದ್ದರು. ಯಾವುದು ಎಂದು ನಾನು ನೋಡಿಲ್ಲ. ಆದರೆ ಬೆರಳಚ್ಚು ಮಾಡಲು ಒಂದು ಯಂತ್ರವನ್ನು ತೆಗೆದುಕೊಂಡು ಬಂದಿದ್ದರು. ನಿಪಿ 2 ನ್ನು ಬರೆಯಲು ಯಾರು ಹೇಳಿದರು ಎಂದರೆ ನನಗೆ ಗೊತ್ತಿಲ್ಲ, ನಾನು ಸಹಿ ಹಾಕಿ ಬಂದೆ. ಬೆರಳಚ್ಚು ಮಾಡಿದ ನಂತರ ನಿಪಿ 2 ರಲ್ಲಿರುವ ವಿಷಯವನ್ನು ನನಗೆ ಯಾರಾದರೂ ಓದಿ ಹೇಳಿದರಾ ಎಂದರೆ ಇಲ್ಲ. ನಮ್ಮ ಊರು ಮತ್ತು ಕೆಂದನಹಳ್ಳಿಗೆ ಅರ್ಧ ಕಿ.ಮಿ. ದೂರ ಇರುತ್ತದೆ. ಅಪಘಾತ ಆದ ನಂತರ ಪೋಲೀಸರು ಸ್ಥಳಕ್ಕೆ 12-05-2022 ರಂದು ಬಂದಿದ್ದರು. ಘಟಾನಾ ಸ್ಥಳದಲ್ಲಿ ಸಾರ್ವಜನಿಕರು ಮದ್ಯಾಹ್ನ ಸಮಯದಲ್ಲಿ ಓಡಾಡುತ್ತಿದ್ದರು ಎಂದರೆ ಸರಿ. ಪೋಲೀಸರು ಘಟನಾ ಸ್ಥಳದಲ್ಲಿ ಅಕ್ಕ ಪಕ್ಕದವರನ್ನು ಪಂಚನಾಮೆಗೆ ಬರಮಾಡಿಕೊಳ್ಳಲು ಪ್ರಯತ್ನ ಪಟ್ಟರಾ ಎಂದರೆ ನನಗೆ ಗೊತ್ತಿಲ್ಲ. ಪೋಲೀಸರು ನಮ್ಮ ಊರಿಗೆ ಬಂದು ನನ್ನನ್ನು ನಿಪಿ 2 ಕ್ಕೆ ಸಹಿ ಹಾಕಲು ಕರೆದುಕೊಂಡು ಬಂದರು ಎಂದರೆ ಸರಿ. ನಿಪಿ 2 ಕ್ಕೆ ಸಹಿ ಹಾಕಿದ್ದು ಬಿಟ್ಟು ಬೇರೆ ಅಲ್ಲಿ ಏನಾಯಿತು ಎಂದು ನನಗೆ ಗೊತ್ತಿಲ್ಲ. ಚಾಸಾ 4, 13 ಹಾಗೂ 14 ನಾವೆಲ್ಲರೂ ಠಾಣೆಯಲ್ಲಿ ನಿಪಿ 2 ಕ್ಕೆ ಸಹಿ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಕೆಂದನಹಳ್ಳಿ ಗೇಟ್ ನ ಬಳಿ ಸಹಿ ಹಾಕಿರುತ್ತೇವೆ. ನಾನು ಹಾಗೂ ಚಾಸಾ 14 ರವರು ಈ ರೀತಿ ಸಾಕ್ಷ್ಯ ಹೇಳಲು ಮೊದಲೇ ವಿಚಾರ ಮಾಡಿ ಬಂದಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

ಪಿಡಬ್ಲೂಃ5
ಸಿಡಬ್ಲೂಃ 5

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.